ಪಿಡಬ್ಲ್ಯೂ -1

ಇಂದು ದಿ. 10-08-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ.

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರ ರೂಪದಲ್ಲಿ ಸಲ್ಲಿಸಿದ್ದು, ಅದರಲ್ಲಿನ ಎಲ್ಲಾ ಅಂಶಗಳನ್ನು ಓದಿ ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ನ್ಯಾಯಾಲಯಕ್ಕೆ ನನಗೆ ಸಂಬಂಧಿಸಿದ ಕೊಂಡಜ್ಜಿ ಗ್ರಾಮದ ಸರ್ವೆ ನಂ.217 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.1 ಎಂದು ಹಾಗೂ ಉಪನೋಂದಣಾಧಿಕಾರಿಗಳು ಹರಿಹರ ಇವರು ನೀಡಿದ ಮಾರುಕಟ್ಟೆ ಮೌಲ್ಯ ದರ ಪಟ್ಟಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು. ಈ ದಾಖಲೆಗಳನ್ನು ಪರಿಗಣಿಸಿ ನಾನು ಅರ್ಜಿಯಲ್ಲಿ ಕೋರಿಕೊಂಡ ಪರಿಹಾರವನ್ನು ನೀಡಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇನೆ.

ಪಾಟೀಸವಾಲುಃ - ಎದುರುದಾರರ ಪರ ವಕೀಲರಿಂದ ಃ

ನಮ್ಮ ಜಮೀನಿನಲ್ಲಿ 2014 ರಲ್ಲಿ ಲೈನ್ ಎಳೆಯಲಾಗಿದೆ ಎಂದರೆ ಸರಿ. ಆ ಸಮಯದಲ್ಲಿ ಕಂಪನಿಯವರು ನಮ್ಮ ಮನೆಗೆ ಬಂದು ನಮ್ಮಲ್ಲಿ ಮಾತಾಡಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನನಗೆ ಕೇವಲ ಬೆಳೆ ನಷ್ಟದ ಕುರಿತಾಗಿ ಕಡಿಮೆ ದುಡ್ಡು ರೂ.50,000-00 ಕೊಟ್ಟಿರುತ್ತಾರೆ. ಆ ರೀತಿ ದುಡ್ಡು ಕೊಟ್ಟು ನಾವು ಸಹಿ ಹಾಕಿದ ಬಳಿಕವೇ ಲೈನ್ ಎಳೆಯಲು ನಾವು ಅವಕಾಶ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ಮಳೆ ಬಂದಾಗ ಮಾತ್ರ ಬೆಳೆ ಬೆಳೆಯಲಾಗುತ್ತದೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ಲೈನ್ ಎಳೆಯುವ ಸಮಯದಲ್ಲಿ ಯಾವುದೇ ಮರ ಇರಲಿಲ್ಲ ಎಂದರೆ ಸರಿಯಲ್ಲ. ಈಗಲೂ ಮರಗಳು ಇರುತ್ತವೆ. ನನ್ನ ಅರ್ಜಿಯಲ್ಲಿ ನನ್ನ ಜಮೀನಿನಲ್ಲಿ ಲೈನ್ ಎಳೆಯುವಾಗ ಮರಗಳು ಇದ್ದವು, ಅವುಗಳನ್ನು ಕಡಿದಿರುತ್ತಾರೆ ಎಂದು ಬರೆದಿರುವುದು ಸುಳ್ಳು ಎಂದರೆ ಸರಿ. ನನ್ನ ಜಮೀನಿನಲ್ಲಿ ಟವರ್ ಇಲ್ಲ ಎಂದರೆ ಸರಿ. ನನ್ನ ಜಮೀನಿನಲ್ಲಿ 6 ಮೀಟರ್ ಅಗಲದ ವಿಸ್ತೀರ್ಣದ ಲೈನನ್ನು ಎಳೆಯಲಾಗಿದೆ ಎಂದರೆ ಸರಿ. ಕಂಪನಿಯವರು ನಮ್ಮ ಜಮೀನಿನಲ್ಲಿ ಲೈನ್ ಎಳೆಯುವ ಸಮಯದಲ್ಲಿ ಆಗಿನ ಮೌಲ್ಯಕ್ಕೆ ಸರಿಯಾಗಿ ಹಣವನ್ನು ನೀಡಿ ನಮ್ಮ ಒಪ್ಪಿಗೆಯನ್ನು ಪಡೆದುಕೊಂಡು ನಂತರ ಲೈನನ್ನು ಎಳೆದಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಜಮೀನಿನಲ್ಲಿ ಬೆಳೆಯಲಾದ ಬೆಳೆಗಳ ನಾಶದ ಕುರಿತಾಗಿ ಮಾತ್ರ ಪರಿಹಾರ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ಅರ್ಜಿಯಲ್ಲಿ

ಬಲತ್ಕಾರದಿಂದ ಕಂಪನಿಯವರು ನನ್ನ ಜಮೀನಿನಲ್ಲಿ ಲೈನ್ ಎಳೆದಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2018 ರಲ್ಲಿ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ನನ್ನ ಜಮೀನಿನಲ್ಲಿ ಸುಮಾರು 20 ಗುಂಟೆಗಳಷ್ಟು ವ್ಯಾಪ್ತಿಯಲ್ಲಿ ಲೈನನ್ನು ಎಳೆದಿರುತ್ತಾರೆ. ನಮ್ಮ ಅರ್ಜಿಯಲ್ಲಿ ನಾವು 52 ಗುಂಟೆಗಳಷ್ಟು ಬರೆದಿರುವುದು ಸುಳ್ಳು ಎಂದರೆ ಸಾಕ್ಷಿಯು ಇರಬಹುದು ನಾನು ಸರಿಯಾಗಿ ಅಳತೆ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಾಗಿದೆ

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.